ಮಂಡಿಕೇರಿಯಲ್ಲಿ ಹೊಸ ಆಸ್ಪತ್ರೆ ಕಟ್ಟಡ ನಿರ್ಮಾಣ

೧೭೮. ಶ್ರೀ ಡಿ. ಎ. ಚಿಣ್ಣಪ್ಪ (ಮಂಡಿಕೇರಿ).– ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಂಡಿಕೇರಿಯಲ್ಲಿ ಸರಕಾರದ ವತಿಯಿಂದ ೧.೪೦ ಕೋಟಿ ರೂ.ಗಳ ಅಂದಾಜಿನ ಹೊಸ ಆಸ್ಪತ್ರೆ ಕಟ್ಟಡ ನಿರ್ಮಾಣವಾಗುತ್ತಿದೆಯೇ ?

ಆ) ಹಾಗಿದ್ದರೆ ಇಲ್ಲಿಯ ತನಕ ಬಿಡುಗಡೆಯಾದ ಹಣವೆಷ್ಟು ?

ಇ) ಈ ಕಟ್ಟಡ ನಿರ್ಮಾಣವು ಈಗ ಯಾವ ಹಂತದಲ್ಲಿದೆ ?

ಈ) ಈ ಕಟ್ಟಡವು ಯಾವಾಗ ಮುಗಿದು ಜನರ ಬಳಕೆಗೆ ಬರುವುದು ?

ಶ್ರೀ ಹೆಚ್. ಡಿ. ದೇವೆಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಹೌದು. ಈ ಕೆಲಸದ ಮೊದಲನೆ ಹಂತವಾದ ಹೊರ ರೋಗಿಗಳ ಕಟ್ಟಡದ ಕೆಲಸ ೩೦ ಲಕ್ಷ ರೂ.ಗಳ ಅಂದಾಜಿನ ಕೆಲಸ, ನಿರ್ಮಾಣದಲ್ಲಿದೆ.

ಆ) ಇಲ್ಲಿಯ ತನಕ, ಅಂದರೆ ಜುಲೈ ೧೯೮೭ರ ವರೆಗೆ, ಒಟ್ಟು ರೂ.೨೫,೯೪,೯೯೧ ಹಣ ಖರ್ಚಾಗಿದೆ.

ಇ) ಈ ಕಟ್ಟಡದ ಕೆಲಸಗಳು ಈಗಾಗಲೇ ಮುಗಿಯುಂತಾ ಬಂದಿದ್ದು, ಬಾಗಿಲು ಮತ್ತು ಕಿಟಕಿಗಳನ್ನು ಅಳವಡಿಸಬೇಕಾಗಿದೆ. ಮೇಲ್ಚಾವಣಿಗೆ ಹವಾಮಾನ ನಿರೋಧಕ ಪದರು ಹಾಕಬೇಕಾಗಿದೆ. ನಲ್ಲಿ ನೀರು ಸರಬರಾಜು ಮತ್ತು ನಿರ್ಮಲೀಕರಣ ಕೆಲಸ ಮಾತ್ರ ಆಗಬೇಕಾಗಿದೆ.

ಈ) ಹಣದ ಸೌಲಭ್ಯ ಒದಗಿದಲ್ಲಿ ೧೯೮೭ ಡಿಸೆಂಬರ್ ಮಾಹೆಯ ಅಂತ್ಯದ ಒಳಗೆ ಮುಗಿಸ ಬಹುದು.

ಶ್ರೀ ಡಿ. ಎ. ಚಿಣ್ಣಪ್ಪ.— ಅಧ್ಯಕ್ಷರೆ, ಈ ಹಾಸ್ಪಿಟಲ್ ೪೦೦ ಬೆಡ್ಸ್‌ನ ಹಾಸ್ಪಿಟಲ್. ೨೦೦ ಬೆಡ್ ಹಾಸ್ಪಿಟಲ್ ಡಿಸ್‌ಮೆಂಟಲ್ ಮಾಡಿದ್ದು ೧೯೮೨ರಲ್ಲಿ. ಈವರೆಗೆ ಅದಕ್ಕೆ ಖರ್ಚು ಮಾಡಿರುವುದೂ ೩೦ ಲಕ್ಷ ರೂಪಾಯಿಗಳು ಇದಕ್ಕೆ ಒರಿಜಿನಲ್ ಎಸ್ಟಿಮೇಟ್ ೧ ಕೋಟಿ ೪೦ ಲಕ್ಷ ರೂಪಾಯಿಗಳು. ಆದರೆ ಅಲ್ಲಿ ಜನರನ್ನು ವರಾಂಡಾದಲ್ಲಿ ಹಾಕಿಕೊಂಡು ಆಸ್ಪತ್ರೆ ನಡೆಸುತ್ತಿದ್ದಾರೆ. ಇಷ್ಟು ನಿಧಾನವಾಗಿ ಕೆಲಸ ಮಾಡಲಿಕ್ಕೆ ಕಾರಣ ಏನು ಎಂದೂ ಕೇಳಬಯಸುತ್ತಿದ್ದೇನೆ.

ಶ್ರೀ ಹೆಚ್. ಡಿ. ದೇವೇಗೌಡ.— ಸ್ವಾಮಿ, ಇದಕ್ಕೆ ಮುಂಜೂರಾತಿ ಕೊಟ್ಟಿದ್ದುದು ೩೦ ಲಕ್ಷಕ್ಕೆ. ಮಾಸ್ಟರ್‌ಪ್ಲಾನ್ ಸರ್ಕಾರಿ ಒಪ್ಪಿರತಕ್ಕದ್ದು ೧ ಕೋಟಿ ೪೦ ಲಕ್ಷ ರೂಪಾಯಿಗಳಿಗೆ. ಈ ಕಾಮಗಾರಿಯಲ್ಲಿ ೩೦ ಲಕ್ಷ ರೂಪಾಯಿಗಳ ಅಂದಾಜು ಪಟ್ಟಿಗೆ ದಿನಾಂಕ ೧೬–೧೧–೮೧ರ ಆದೇಶ ಸಂಖ್ಯೆ: ಪಿ.ಎ.ಆರ್. ೩೧–೮೧–೨೨ರಲ್ಲಿ ಮುಂಜೂರಾತಿ ಕೊಟ್ಟಿದೆ. ಫಸ್ಟ್ ಸ್ಟೇಜಿಗೆ ೩೦ ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದೆ. ಒಟ್ಟು ಮಾಸ್ಟರ್ ಪ್ಲಾನ್ ೧ ಕೋಟಿ ೪೦ ಲಕ್ಷ ರೂಪಾಯಿಗಳಿಗೆ ತಯಾರಾಗಿದೆ. ಅಡಿಷನಲ್ ಗ್ರ್ಯಾಂಟ್ ಸಿಕ್ಕಿದರೆ ಮಾರ್ಚ್ ೮೮ಕ್ಕೆ ಮುಗಿಸುವುದಕ್ಕೆ ಸಾಧ್ಯವಾಗ ಬಹುದು. ಇರತಕ್ಕ ಗ್ರ್ಯಾಂಟಿಗೆ ಇನ್ನೂ ಒಂದು ಲಕ್ಷ ಬೇಕಾಗಿದೆ. ಇಷ್ಟನ್ನು ದೊರಕಿಸಿಕೊಂಡರೆ ಮಾರ್ಚ್ ೮೮ಕ್ಕೆ ಮುಗಿಸಬಹುದು ಎಂದು ನನಗೆ ಬಂದಿರತಕ್ಕ ವರದಿ.

ರಾಜ್ಯದಲ್ಲಿರುವ ಏತ ನೀರಾವರಿ ಬಗ್ಗೆ

೨೬೯. ಶ್ರೀ ಕೆ. ಬಿ. ಶಾಣಪ್ಪ (ಶಹಬಾದ್).— ಮಾನ್ಯ ಸಣ್ಣ ನೀರಾವರಿ ಮತ್ತು ಏತ ನೀರಾವರಿ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಒಟ್ಟು ಎಷ್ಟು ಏತ ನೀರಾವರಿ ಕೆಲಸಗಳನ್ನು ಇದುವರೆಗೆ ಸರ್ಕಾರವು ತೆಗೆದುಕೊಂಡಿದೆ ?